1992-97ರವರೆಗಿನ ಆದಾಯ ಮತ್ತು ನಷ್ಟದ ವಿವರ :

ಕ್ರ.ಸಂ.	ವರ್ಷ	ಆದಾಯ	ವೆಚ್ಚ	ನಷ್ಟ : ಲಾಭ
1.	1992-93	45,664	2,71,263	2,25,599 (-)
2.	1993-94	68,255	2,34,928	1,66,073 (-)
3.	1994-95	2,23,569	1,74,747	48,822 (-)
4.	1995-96	1,59,394	2,24,520	65,126 (-)
5.	1996-97	2,01,831	2,79,589	77,758 (-)
6.	1997-98 (ಜುಲೈ ಅಂತ್ಯದವರೆಗೆ)	42,860	44,879	2,019 (-)

ಇ) ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು. ಪ್ರಸಕ್ತ ಸಾಲಿನಲ್ಲಿ 300 ತೆಂಗಿನ ಮರಗಳಿಗೆ ಹನಿ ನೀರಾವರಿ ಹಾಗೂ ಉಳಿದ ಜಮೀನುಗಳ ಅಭಿವೃದ್ಧಿ ಪಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ) ಈ ಕೇಂದ್ರವನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು. ಪ್ರಸಕ್ತ ಸಾಲಿನಲ್ಲಿ 300 ತೆಂಗಿನ ಮರಗಳಿಗೆ ಹನಿ ನೀರಾವರಿ ಹಾಗೂ ಉಳಿದ ಜಮೀನುಗಳ ಅಭಿವೃದ್ಧಿಪಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಳ್ಳಂಬೆಳ್ಳ ಕ್ಷೇತ್ರಕ್ಕೆ ಪ್ರತ್ಯೇಕವಾಗಿ "ಬಗರ್‌ಹುಕುಂ" ಸಮಿತಿ

3004 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳ ಕ್ಷೇತ್ರಕ್ಕೆ ಸೇರಿದ ಮೂರು ತಾಲ್ಲೂಕಿನಲ್ಲಿ ಜಮೀನು ಸಕ್ರಮೀಕರಣಕ್ಕಾಗಿ ಬಂದ ಅರ್ಜಿಗಳೆಷ್ಟು ?(ಎಕರೆವಾರು ವಿವರ ನೀಡುವುದು)

ಆ) ಇದುವರೆಗೆ ಎಷ್ಟು ಅರ್ಜಿಗಳನ್ನು ಇತ್ಯರ್ಥವಾಗಿ ಸಕ್ರಮಗೊಳಿಸಿ ಹಕ್ಕುಪತ್ರ ವಿತರಿಸಲಾಗಿದೆ? (ಎಕರೆವಾರು ವಿವರ ನೀಡುವುದು)

ಇ) ಬಡಜನರಿಗೆ ಜಮೀನು ಸಕ್ರಮಿಸುವ ಕಾರ್ಯ ಮಂದಗತಿಯಿಂದ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಕಳ್ಳಂಬೆಳ್ಳ ಕ್ಷೇತ್ರಕ್ಕೆ ಸೀಮಿತವಾಗಿ ಸರ್ಕಾರ ಪ್ರತ್ಯೇಕ ಸಮಿತಿಯನ್ನು ರಚಿಸಿ ಸಕ್ರಮ ಕಾರ್ಯವನ್ನು ಚುರುಕುಗೊಳಿಸಲು ಕಾರ್ಯ ಪ್ರವೃತ್ತರಾಗುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) ;

ಅ) 13,993 ಅರ್ಜಿಗಳು ಬಂದಿವೆ, ಎಕರೆವಾರು ವಿವರ ಈ ಕೆಳಕಂಡಂತೆಯಿದೆ.

ಕ್ರ. ಸಂ.	ತಾಲ್ಲೂಕು	ಅರ್ಜಿಗಳು ಸಂಖ್ಯೆ	ವಿಸ್ತೀರ್ಣ
1.	ಶಿರಾ	5374	17611-07
2.	ಗುಬ್ಬಿ	2895	6484-02
3.	ಚಿಕ್ಕನಾಯಕನಹಳ್ಳಿ	5724	17334-12
	ಒಟ್ಟು	**13993**	**41429-21**

ಆ) ಇಲ್ಲಿಯವರೆಗೆ ಇತ್ಯರ್ಥಗೊಳಿಸಿ ಸಕ್ರಮಗೊಳಿಸಿರುವ ಅರ್ಜಿಗಳ ಸಂಖ್ಯೆ : 6008. ವಿಸ್ತೀರ್ಣ 18200-39 ಎಕರೆಗಳು. 1438 ಹಕ್ಕುಪತ್ರ ವಿತರಣೆ ಮಾಡಿರುವ ಅರ್ಜಿಗಳ ಸಂಖ್ಯೆ :404. ವಿಸ್ತೀರ್ಣ 756-09 ಎಕರೆ

ಇ) ಬಂದಿದೆ.

ಈ) ಶಿರಾ ತಾಲ್ಲೂಕು ಹೆಚ್ಚುವರಿ ಬಗರ್‌ಹುಕುಂ ಸಾಗುವಳಿ ಸಮಿತಿ ರಚಿಸಲಾಗಿದೆ. ಉಳಿದ ಎರಡು ಗುಬ್ಬಿ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಹೆಚ್ಚುವರಿ ಸಮಿತಿ ರಚಿಸುವ ಬಗ್ಗೆ ಪರಿಶೀಲಿಸಲಾಗುವುದು.

ಕಳ್ಳಂಬೆಳ್ಳದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ

3005 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳ ರಾಷ್ಟ್ರೀಯ ಹೆದ್ದಾರಿ ಬಂಗ್ಲೆ ಬಳಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಬಸ್ ನಿಲ್ದಾಣಕ್ಕಾಗಿ ಕಂದಾಯ ಇಲಾಖೆಯು ಸ.ನಂ. 141ರಲ್ಲಿ ಜಮೀನು ಹಸ್ತಾಂತರ ಮಾಡಿದ್ದು ಇದುವರೆಗೂ ಯಾವುದೇ ಪ್ರಗತಿ ಕಾಣದೆ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಆ) ಈ ಬಗ್ಗೆ ಸರ್ಕಾರದ ಕ್ರಮವೇನು?

ಇ) ಈ ಸಾಲಿನಲ್ಲಿಯೇ ಬಸ್‌ನಿಲ್ದಾಣಕ್ಕಾಗಿ ಅಗತ್ಯ ಹಾಗೂ ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಕಂದಾಯ ಇಲಾಖೆಯಿಂದ ಸದರಿ ಜಮೀನು ಇನ್ನೂ ಹಸ್ತಾಂತರವಾಗಿರುವುದಿಲ್ಲ.

ಆ) ಜಮೀನು ಹಸ್ತಾಂತರವಾದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಉದ್ಭವಿಸುವುದಿಲ್ಲ.